

## ಬಹುಮುಖ ಪ್ರತಿಭೆ ಮೇಲೆ ಕೊನೆಗೂ ಫೋಕಸ್ ಲೈಟ್

‘ಕ್ರಾಕ್‌ರಾಕ್ಸ್’ ಎನ್ನುವುದೊಂದು ನೃತ್ಯ ಪ್ರಕಾರ. ನೋಡುಗರ ಕಣ್ಣಿಗೆ ಕದಲಿಕೆಗಳನ್ನು ಸ್ಲೋ ಮೋಷನ್‌ನಲ್ಲಿ ತೋರಿಸುವ ನೃತ್ಯಕೌಶಲದ ಬಗೆ ಅದು. 2011ರಲ್ಲಿ ಇದು ಭಾರತಕ್ಕೆ ಹೊಸತಾಗಿತ್ತು. ‘ಡಾನ್ಸ್ ಇಂಡಿಯಾ ಡಾನ್ಸ್ 3’ ರಿಯಾಲಿಟಿ ಶೋ ಆಯ್ಕೆಗಾಗಿ, ರಾಘವ್ ಜೋಯಲ್ ಎಂಬ ಹುಡುಗ ಈ ನೃತ್ಯಕೌಶಲವನ್ನು ಆಡಿಷನ್‌ನಲ್ಲಿ ಪ್ರದರ್ಶಿಸಿದ. ತೀರ್ಪುಗಾರರು ಅದನ್ನು ನೋಡಿ ಚಕಿತರಾದರಾದರೂ, 18 ಸ್ಪರ್ಧಿಗಳಲ್ಲಿ ಒಬ್ಬನನ್ನಾಗಿ ಈ ಹುಡುಗನನ್ನು ಆಯ್ಕೆ ಮಾಡಲಿಲ್ಲ. ಸಾಮಾಜಿಕ ಮಾಧ್ಯಮದಲ್ಲಿ ರಾಘವನ ‘ಕ್ರಾಕ್‌ರಾಕ್ಸ್’– ಒಂದು ಬಗೆಯಲ್ಲಿ ವಿಸ್ಕಿ ಕಿಕ್ ಕೊಡುವಂತೆ– ನಿಧಾನಕ್ಕೆ ನೋಡುಗರಲ್ಲಿ ನಶೆ ಏರಿಸಿತು. ನಟ ಮಿಥುನ್ ಚಕ್ರವರ್ತಿ ಹಕ್ಕೊತ್ತಾಯದಿಂದ ರಿಯಾಲಿಟಿ ಶೋಗೆ ರಾಘವನ ಪ್ರವೇಶ ಆಯಿತು.

ಆಡಿಷನ್ ಕೊಡುವುದು, ತಿರಸ್ಕೃತಗೊಂಡರೆ ಹೊಸತನ್ನು ಕಲಿಯುವುದು ಎಂದೇ ಸಂಕಲ್ಪ ಮಾಡಿಕೊಂಡು ಡೆಹ್ರಾಡೂನ್‌ನಿಂದ ನೃತ್ಯಾವಕಾಶಕ್ಕಾಗಿ ಆಕಾಶ ನೋಡುತ್ತಾ ಮುಂಬೈಗೆ ಬಂದಿದ್ದ ಹುಡುಗರಲ್ಲಿ ರಾಘವ್ ಕೂಡ ಒಬ್ಬರು. ಈಗ ಅವರು ನಟರಾಗಿ ಛಾಪು ಮೂಡಿಸುತ್ತಿದ್ದಾರೆ. ಏಕವಚನದಲ್ಲಿ ಅವರನ್ನು ಸಂಬೋಧಿಸುತ್ತಿದ್ದ ಅನೇಕರ ನಾಲಗೆಗಳಲ್ಲಿ ಸಹಜವಾಗಿಯೇ ಬಹುವಚನ ಮೂಡಲಾರಂಭಿಸಿದೆ.

ಟಿ.ವಿ. ನಿರೂಪಕ, ನೃತ್ಯ ಪ್ರದರ್ಶಕ, ವಿದೂಷಕ, ಮಾತಿನ ಮೋಡಿಗಾರ... ಹೀಗೆ ರಾಘವ್ ಜೋಯಲ್ ಹಲವು ಬೂಟುಗಳಲ್ಲಿ ಕಾಲಿರಿಸಿದ್ದವರು. ಅವರ ಪಾದಗಳು ಎಲ್ಲಕ್ಕೂ ಸಲೀಸಾಗಿ ಹೊಂದಿಕೊಳ್ಳುತ್ತಿದ್ದವು. ಮಧ್ಯೆ ಮಧ್ಯೆ ಸಿನಿಮಾ ಅಭಿನಯದ ಅವಕಾಶಗಳೂ ಸಿಕ್ಕವು. ‘ಎಬಿಸಿಡಿ 2’, ‘ನವಾಬ್‌ಜಾದೆ’, ‘ಸ್ಟ್ರೀಟ್‌ಡಾನ್ಸರ್ 3ಡಿ’, ‘ಬಹುತ್ ಹುವಾ ಸಮ್ಮಾನ್’, ‘ಕಿಸಿ ಕಾ ಭಾಯಿ ಕಿಸಿ ಕಿ ಜಾನ್’ ಅವರು ಅಭಿನಯಿಸಿದ ಸಿನಿಮಾಗಳು. ‘ಕಿಸಿ ಕಾ ಭಾಯಿ ಕಿಸಿ ಕಿ ಜಾನ್’ ಸಿನಿಮಾ ಅವಕಾಶ ಖುದ್ದು ಸಲ್ಮಾನ್ ಖಾನ್ ಅವರಿಂದ ಸಿಕ್ಕಿದ್ದ ಕ್ಷಣವನ್ನು ಈಗಲೂ ರಾಘವ್ ಮೆಲುಕು ಹಾಕುತ್ತಾ ಇರುತ್ತಾರೆ.

ಇಷ್ಟೆಲ್ಲ ಚಿತ್ರಗಳು ಬಂದರೂ ನಟನಾಗಿ ರಾಘವ್ ಜಗಿತ ಕಂಡಿದ್ದಾರೆಂದು ಯಾರೂ ಮಾತನಾಡಲಿಲ್ಲ. ಆದರೆ, ಕಳೆದ ಕೆಲವು ತಿಂಗಳಲ್ಲಿ ಈ ಹುಡುಗನ ನಸೀಬು ಬದಲಾಗಿದೆ. ಖಳನಾಯಕನಾಗಿ ಅವರು ಅಭಿನಯಿಸಿದ ‘ಕಿಲ್’ ಹಾಗೂ ‘ಗ್ಯಾರಹ್ ಗ್ಯಾರಹ್’ ಕುರಿತು ಬಾಲಿವುಡ್ ಓಣಿಗಳಲ್ಲಿ ಅನುರಣನ ಶುರುವಾಗಿದೆ. ಯಾವ ಪಾತ್ರಗಳಿಗೂ ಜೀವ ತುಂಬಬಲ್ಲ ಉತ್ಕಟತೆ ಅವರಲ್ಲಿ ಇದೆ ಎಂದು ಕೊಂಡಾಡುವವರ ಸಂಖ್ಯೆಯೂ ಏರುತ್ತಿದೆ.

ಸಣ್ಣ ಪಟ್ಟಣದ ಹುಡುಗ ದೊಡ್ಡ ನಗರಕ್ಕೆ ಕನಸುಗಳ ಮೂಟೆ ಕಟ್ಟಿಕೊಂಡು ಬಂದು, ಸವಾಲುಗಳಿಗೆ ಎದೆಗೊಡುತ್ತಲೇ ಬೆಳೆಯಲು ಒಂದೂವರೆ ದಶಕ ಬೇಕಾಯಿತು. ಈ ಹೋರಾಟದ ಎಲ್ಲ ಎಪಿಸೋಡುಗಳೂ ತನಗೆ ನೆನಪಿವೆ ಎಂದು ರಾಘವ್ ತಮ್ಮದೇ ನಗೆರುಜು ಹಾಕುತ್ತಾರೆ. ■

# ಹಿಂದಿ ಚಿತ್ರದಲ್ಲಿ ಫಹಾದ್?

ಕವಿ ಹೃದಯದ, ಹಿಂದಿ ಸಿನಿಮಾ ನಿರ್ದೇಶಕ ಇಮ್ತಿಯಾಜ್ ಅಲಿ ಕಣ್ಣು ಮಲೆಯಾಳಂ ನಟ ಫಹಾದ್ ಫಾಸಿಲ್ ಮೇಲೆ ಬಿದ್ದಿದೆ. ಈ ನಿರ್ದೇಶಕ ಅದಾಗಲೇ ಫಹಾದ್ ಜೊತೆ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆದರೆ, ಮಲೆಯಾಳಂ ನಟ ಹಿಂದಿ ಚಿತ್ರರಂಗ ಪ್ರವೇಶಿಸುವುದು ಖಚಿತ ಎಂದು ಅಂದಾಜಿಸಲಾಗುತ್ತಿದೆ.

ಇಮ್ತಿಯಾಜ್ ಅಲಿ ಪ್ರೇಮಕಥೆಯ ಸ್ಕ್ರಿಪ್ಟ್ ಒಂದನ್ನು ಸಿದ್ಧಪಡಿಸಿದ್ದು, ಅದರ ಕೇಂದ್ರ ಪಾತ್ರದಲ್ಲಿ ಫಹಾದ್ ನಟಿಸಿದರೆ ಚೆನ್ನಾಗಿರುತ್ತದೆ ಎಂದು ನಿರ್ಧರಿಸಿದ್ದಾರೆ. ಅದಕ್ಕೇ ಅವರು ನಟನೊಟ್ಟಿಗೆ ಮಾತುಕತೆ ನಡೆಸಿದ್ದು.

ಮಲೆಯಾಳಂ ಚಿತ್ರಗಳಲ್ಲಿ ಅಷ್ಟೇ ಅಲ್ಲದೆ ತಮಿಳು, ತೆಲುಗು ಸಿನಿಮಾಗಳಲ್ಲಿಯೂ ಅಭಿನಯಿಸಿರುವ ಫಹಾದ್, ಈಗ ದೇಶದಲ್ಲೇ ಗುರುತಾಗಿರುವ ನಟರಲ್ಲಿ ಒಬ್ಬರು. ಅವರ ನಿಯಂತ್ರಿತ ಭಾವಾಭಿನಯವನ್ನು ಬಹಳ ಹಿಂದೆಯೇ ಇಮ್ತಿಯಾಜ್ ಮೆಚ್ಚಿಕೊಂಡಿದ್ದರು.

ಸಂಗೀತಗಾರನ ಆತ್ಮಕಥೆಯನ್ನು ಆಧರಿಸಿದ ‘ಅಮರ್‌ಸಿಂಗ್ ಚಮ್ಕಿಲಾ’ ಚಿತ್ರವನ್ನು ಇಮ್ತಿಯಾಜ್ ಅಲಿ ನಿರ್ದೇಶಿಸಿದ್ದು, ಅದು ‘ನೆಟ್‌ಫ್ಲಿಕ್ಸ್’ನಲ್ಲಿ ಲಭ್ಯವಿದೆ. ದಲ್ಜಿತ್ ದೊಸಾಂಜ್ ಹಾಗೂ ಪರಿಣಿತಿ ಚೋಪ್ರಾ ನಟಿಸಿರುವ ಈ ಚಿತ್ರವನ್ನು ವಿಮರ್ಶಕರು ಮೆಚ್ಚಿಕೊಂಡಿದ್ದಾರೆ.

ಫಹಾದ್ ಅವರಿಗೆ ಇಮ್ತಿಯಾಜ್ ಯಾವ ರೀತಿಯ ಪಾತ್ರದ ಅಂಗಿ ತೊಡಿಸುವರೋ... ನೋಡಬೇಕು.

■

